ಯಾವುದೋ ಮಾರ್ಕೆಟ್‌ಗಳಲ್ಲಿ ಪ್ರತ್ಯಕ್ಷ ಆಗ್ತಿದ್ದರು ಅನ್ನೋದು ಬಿಟ್ಟರೆ ಉಳಿದಂತೆ ಮುಂಬೈನಲ್ಲಿ ಅವರು ಕಾಣಿಸ್ಕೋತಿರಲಿಲ್ಲ. ಒಂದು ಸಲ ಬೆಂಗಳೂರಿಗೆ ಬಂದಾಗ ಮಾರ್ಕೆಟಲ್ಲೋ ಎಲ್ಲೋ ಒಬ್ಬ ಹಾವಾಡಿಗ ಅಂಗಡಿಯಲ್ಲಿ ಏನೋ ಕೊಂಡ್ಕೋತಾ ಇದ್ದದ್ದನ್ನ ನೋಡಿದೆ. ಅಲ್ಲಿನ ಜನಸಂದಣಿಯಲ್ಲಿ ಈಗಿನ ನಾಗರಿಕತೆಯ ನಡುವೆ ಅವನು, ಅವನ ವೇಷ ಎಲ್ಲ ವಿಚಿತ್ರವಾಗಿ ಕಾಣಿಸಿತು. ಆ ಕ್ಷಣದ ಅವನ ಚಿತ್ರ ನನ್ನಲ್ಲಿ ಉಳಿದು ಹಾವಾಡಿಗ ಕತೆ ಹುಟ್ಟಿತು.

◆ ಭಾಷೆಯ ಸೂಕ್ಷ್ಮತೆಗಳು... ಬದಲಾವಣೆಗಳ ಬಗ್ಗೆ ಹೇಳಿ...

ಭಾಷೆ ಬದಲಾಗುತ್ತಲೆ ಇರುತ್ತೆ ಅಲ್ವಾ... ಇಲ್ಲಿಂದ ಬೇರೆ ಕಡೆ ಹೋಗೋವಾಗ ನಮ್ಮಲ್ಲಿ ಉಳಿದಿರುವ ಭಾಷೆಯನ್ನೇ ಹೊತ್ತುಕೊಂಡು ಹೋಗಿರ್ತಿವಿ. ಆದರೆ, ಮರಳಿ ಊರಿಗೆ ಬರೋಹೊತ್ತಿಗೆ ಆ ಭಾಷೆಯ ಸ್ವರೂಪ ಬದಲಾಗಿರುತ್ತೆ. ಮುಂಬೈಯಿಂದ ಇಲ್ಲಿಗೆ ಬಂದಾಗ ಆ ಬದಲಾವಣೆ ಕಂಡಿತ್ತು. ಅದೊಂದು ಬಹಳ ಕುತೂಹಲಕಾರಿ ಪ್ರಕ್ರಿಯೆ.



ಅದೇ ರೀತಿ ಮುಂಬೈನಲ್ಲಿ ನೋಡಿದಾಗ ನಮ್ಮ ಕನ್ನಡಗಳು ಎಷ್ಟು ಭಿನ್ನ ಅಂತ ಗೊತ್ತಾಗೋದು. ಚಿತ್ತಾಲರ ಭಾಷೆ, ಬಲ್ಲಾಳರ ಭಾಷೆ, ಜಯಂತ್ ಭಾಷೆ, ನನ್ನ ಭಾಷೆ ಕನ್ನಡವೇ ಆದರೂ ಅವೆಲ್ಲ ಒಂದೇ ರೀತಿ ಇಲ್ಲ. ಜೊತೆಗೆ ಮುಂಬೈಯಲ್ಲಿನ ಕನ್ನಡಿಗರೆಲ್ಲ ಸೇರಿ ಹಿಂದಿ ಸೇರಿಸ್ಕೊಂಡು ಅವರದೇ ಒಂದು ಕನ್ನಡ ರೂಢಿಸಿಕೊಂಡು ಬಿಟ್ಟಿರುತ್ತಾರೆ. 'ನೂರು ಸ್ವರ' ಕಾದಂಬರಿಯಲ್ಲಿ ಆ ತರಹದ ಭಾಷೆ ಬಳಸಿದಿನಿ. ಒಂದು ಸಲ ನಿಘಂಟು ತಜ್ಞ ಜಿ. ವೆಂಕಟಸುಬ್ಬಯ್ಯ ಅವರು ನನಗೆ ಹೇಳಿದ್ದರು, 'ಏನಮ್ಮಾ, ನೀನೊಂದು ಹೊಸ ಮುಂಬೈ ಕನ್ನಡವನ್ನೇ ಕ್ರಿಯೇಟ್ ಮಾಡಿದ್ದಿಯಲ್ಲ' ಅಂತ. ಅದು ಪ್ರಜ್ಞಾಪೂರ್ವಕವಾಗಿ ಮಾಡಿದ್ದಲ್ಲ ತಾನಾಗಿ ಆಗಿದ್ದು. ಹಿಂದಿಯನ್ನು ಬೆರೆಸಿಕೊಂಡು ಮಾತಾಡೋದು ಅಭ್ಯಾಸ ಆಗೋಗುತ್ತೆ. ಒಂದು ಸಲ ಒಂದು ಜಾಹೀರಾತಿನ ಜಿಂಗಲ್‌ನಲ್ಲಿ ನಟಿಸಿದ್ದೆ. ಆ ಸೀನಿನಲ್ಲಿ 'ನೀವು ಮಾಡ್ತಿರಾ' ಅಂದಾಗ ನಾನು 'ಹ್ಞಾಂ' ಅಂದುಬಿಡ್ತಿದ್ದೆ. ಆ ಸೀನ್ ಯಾರು ಬರೆದಿರ್ತಾರೋ ಅವರು ಭಾಷೆಯ ಸೂಪರ್‌ವೈಸ್ ಮಾಡಲು ಬಂದಿರ್ತಾರೆ. ಆ ಸೀನ್ ಬರೆದಿದ್ದು ಕುಂದಾ ರಿಗೆ ಅಂತ ರಂಗಭೂಮಿ ವ್ಯಕ್ತಿ. ಅವರು ಬಂದಿದ್ದರು. ಅವರು ಹೇಳಿದರು, 'ಹ್ಞಾಂ ಅನ್ನಬೇಡಿ ಹೂಂ ಅನ್ನಿ' ಅಂತ. ಕನ್ನಡದಲ್ಲಿ ಯಾರೂ 'ಹ್ಞಾಂ' ಅನ್ನಲ್ಲ 'ಹೂಂ' ಅಂತಾರೆ. ನನ್ನ ಮಾತಲ್ಲಿ ಇವತ್ತಿಗೂ 'ಹ್ಞಾಂ', 'ಅಚ್ಚಾ' ತರಹದ ಪದಗಳು ಉಳಿದಿವೆ.

◆ ಬರವಣಿಗೆಯ ಸ್ವರೂಪ ಹೇಗಿರಬೇಕು?

ಮೊದಲಿನಿಂದಲೂ ಬರವಣಿಗೆಯಲ್ಲಿ ಏನೋ ಒಂದು ಹೊಸತನವಿರಬೇಕು ಅನ್ನುವುದು ನನ್ನ ಹಂಬಲ. ಅದರ ವಸ್ತು, ಭಾಷೆ, ಶೈಲಿ ಎಲ್ಲವೂ ಭಿನ್ನವಾಗಿರಬೇಕು ಅನ್ನುವ ತುಡಿತ ಇದ್ದೇ ಇದೆ. ಆದ್ದರಿಂದಲೇ ಕತೆ, ಅಂಕಣ, ಕವಿತೆ ಏನೇ ಬರೆದರೂ ಅದನ್ನು ಭಿನ್ನವಾಗಿಯೇ ಬರೆಯಲು ಯತ್ನಿಸುತ್ತೇನೆ. ಜೊತೆಗೆ, ಬರವಣಿಗೆ ಎಲ್ಲವನ್ನೂ ಸ್ಪಷ್ಟವಾಗಿ ಅರ್ಥವಾಗುವಂತೆ ಹೇಳಿಬಿಡಬಾರದು. ಅದರಲ್ಲೊಂದು 'ಕಾಡುವಿಕೆ'ಯ ಅಂಶ ಇರಬೇಕು. ಅದು ಬರೆದವರಿಗೂ ಕಾಡಬೇಕು, ಓದುಗರಿಗೂ ಕಾಡಬೇಕು. ಅರ್ಥಕ್ಕೆ ಮೀರಿದ ಏನೋ ಒಂದು ಓದುಗರ ಮನಸನ್ನು ಆಳದಲ್ಲಿ 'ಮೀಟಬೇಕು'. ಆಗಲೇ ಬರೆದದ್ದು ಸಾರ್ಥಕ ಅನ್ನಿಸುತ್ತದೆ.